ತಾರೀಖು 10ನೆ ಏಪ್ರಿಲ್ 1907.

ನಂ. 9362—ಮೆಡಿ. 270-06—3, ಶಿವನ ಸಮುದ್ರದಲ್ಲಿನ ಸಬ್ ಅಸಿಸ್ಟೆಂಟ್ ಸರ್ಜನ್ ಮಿ॥ ಟಿ. ಎಸ್. ಸಿದ್ದಪ್ಪನವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣವನ್ನನುಸರಿಸಿ 1907ನೆ ಇಸವಿಯ ಮಾರ್ಚ್ 21ನೆ ತಾರೀಖಿನ ಅಪರಾಹ್ನದ ಲಾಗಾಯಿತು 15 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 10ನೆ ಏಪ್ರಿಲ್ 1907.

ನಂ. 9381—ಎಡ್ಯು. 198-06—9, ಮೈಸೂರು ಸೀಮೆಯ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್ ಮಿ॥ ಎಚ್. ಜೆ. ಖಾಖಾ ಯವರಿಗೆ, 1907ನೆ ಇಸವಿಯ ಜನವರಿ 16ನೆ ತಾರೀಖಿನ 6438—ಎಡ್ಯು. 198-06—3 ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಪ್ರಿವಿಲೇಜ್ ರಜೆಗೆ ಸೇರಿಸಿ 1907ನೆ ಇಸವಿಯ ಫೆಬ್ರವರಿ ತಿಂಗಳ ಕಡೆಯ ವರಗೆ ಕೊಟ್ಟಿದ್ದ ಫರ್ಲೋ ರಜಾವನ್ನು, ಮೊದಲೇ ಮಂಜೂರಾಗಿದ್ದ ಒದಲಿ ವಿರ್ಣಾಮುಗಳ ಮೇಲೆ, 1907ನೆ ಇಸವಿಯ ಮಾರ್ಚ್ 3ನೆ ತಾರೀಖಿನ ವರೆಗೆ (ಆ ದಿನವೂ ಸೇರಿ) ಪುನಃ ಹೆಚ್ಚಿಸಿದೆ.

ತಾರೀಖು 15ನೆ ಏಪ್ರಿಲ್ 1907.

ನಂ. 9573—Med. 41-06—10, ಕೂನೂರಲ್ಲಿರುವ ದಕ್ಷಿಣ ಇಂಡಿಯಾನ ಪ್ಯಾಸ್ಟರ್ ಇನ್‌ಸ್ಟಿಟ್ಯೂಟಿನ ಡೈರೆಕ್ಟರ ವರಿಂದ ಕೊಡಲ್ಪಟ್ಟ ಈ ಕೆಳಗೆ ಸಮೂಹಿಸುವ ನೋಟೀಸನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ :—

ನೋ ಟಿ ಸ್.

ಕೂನೂರಲ್ಲಿರುವ ದಕ್ಷಿಣ ಇಂಡಿಯಾನ ಪ್ಯಾಸ್ಟರ್ ಇನ್‌ಸ್ಟಿಟ್ಯೂಟ್ ಎಂಬ ಆಸ್ಪತ್ರೆಯು, ಹುಚ್ಚು ಪ್ರಾಣಿಗಳಿಂದ ಕಡಿಸಿಕೊಳ್ಳಲ್ಪಟ್ಟವರ ಚಿಕಿತ್ಸೆಗೋಸ್ಕರ, 1907ನೆ ಇಸವಿಯ ಏಪ್ರಿಲ್ ಒಂದನೆ ತಾರೀಖಿನ ಲಾಗಾಯಿತು ತೆರೆಯಲ್ಪಡುತ್ತದೆ.

ತಾರೀಖು 15ನೆ ಏಪ್ರಿಲ್ 1907.

ನಂ. 9572—Med. 247—06—5, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಬೇಲೂರಿನಲ್ಲಿ ಬಂದು ಹೊಸ ಡೆಡ್ ಹೌಸ್ ಮತ್ತು ಶವಪರೀಕ್ಷೆಯ ಮನೆಯನ್ನು ಕಟ್ಟುವುದಕ್ಕೋಸ್ಕರ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಸಕಲೇಶಪುರದ ಜಾರ್ಜಿನಲ್ಲಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರಕೊಟ್ಟಿದೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು	ಸರ್ವೆ ನಂ.	ಖುಷ್ಕಿ, ತರಿ ಯಾ ಬಾಗಾಯ್ತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ	ಚತುರ್ಗಡಿ.			
									ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಹಾಸನ.	ಬೇಲೂರು.	ಬೇಲೂರು.	ವೆಂಕಟರಾಯರ ಮಗ ಸುಬ್ಬು ರಾವ್.	177ರ ಭಾಗ	ಖುಷ್ಕಿ.	ಎ. ಗು. 4 8	ರೂ. ಅ. ಪೈ. 5 4	ಎಕ್ರೆ. ಚದರಗಜ. ಗುಂ. 12 40	ಸರ್ವೆ 171, 172 ಮತ್ತು 173ನೆ ನಂಬರುಗಳು.	ಸರ್ವೆ 176ನೆ ನಂಬರು ಮತ್ತು 177ನೆ ನಂಬರಿನ ಭಾಗ.	ಸರ್ವೆ 177ನೆ ನಂಬರಿನ ಭಾಗ.	ಸರ್ವೆ 5 ಮತ್ತು 175ನೆ ನಂಬರುಗಳು.

ತಾರೀಖು 15ನೆ ಏಪ್ರಿಲ್ 1907.

ನಂ. 9572—MI. 237-06—14, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೀರ್ಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಮೈಸೂರು ನಗರದ ಗಾಣಿಗರಿಗೆ ಎಣ್ಣೆ ತೆಗೆಯುವ ಬಗ್ಗೆ ಒಂದು ಸ್ಥಳ ಏರ್ಪಡಿಸಿಕೊಡುವುದಕ್ಕೋಸ್ಕರ ಅವ